# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]

ದೂರವಾಣಿ: 0821-2340292
Email: aeecescrkn@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಸಂಖ್ಯೆ:-ಸಕಾನಿಇಂ/ಸ.ಇಂ/ಆರ್‌ಕೆನ/ಉವಿ/ಎಫ್ /2018-19/ 490/92 ದಿನಾಂಕ:- 18/7/18

78

## ಸಭಾ ನಡಾವಳಿ

ರಾಮಕೃಷ್ಣ ನಗರ ಉಪ ವಿಭಾಗದಲ್ಲಿ, ಶ್ರೀಯುತ ಮುನಿಗೋಪಾಲ್ ರಾಜು, ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 12.07.2018 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

**ಹಾಜರಿದ್ದ ಅಧಿಕಾರಿ/ನೌಕರರು:-**

1. ಶ್ರೀಯುತ ಮುನಿಗೋಪಾಲ್ ರಾಜು, ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು
2. ಶ್ರೀಮತಿ ದಿವ್ಯ.ಸಿ.ಎನ್, ಸಹಾಯಕ ಇಂಜಿನಿಯರ್(ವಿ),ರಾಮಕೃಷ್ಣನಗರ ಉಪ ವಿಭಾಗ.
3. ಶ್ರೀಯುತ ರಾಘವೇಂದ್ರ.ಎಸ್.ಆರ್, ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
4. ಶ್ರೀಯುತ ಸುರೇಶ್, ಸಹಾಯಕ ಇಂಜಿನಿಯರ್(ವಿ), ಜಯಪುರ ಶಾಖೆ.
5. ಶ್ರೀಮತಿ ಗೀತಾ ಬಿ.ಸಿ, ಹಿರಿಯ ಸಹಾಯಕಿ, ವಿವೇಕಾನಂದ ಶಾಖೆ.
6. ಶ್ರೀಯುತ ಗುರುಸ್ವಾಮಿ, ಕಿರಿಯ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
7. ಶ್ರೀಯುತ ತಿಮ್ಮರಾಜು, ಕಿರಿಯ ಇಂಜಿನಿಯರ್(ವಿ), ಹಾರೋಹಳ್ಳಿ ಶಾಖೆ.

**ಹಾಜರಿದ್ದ ಗ್ರಾಹಕರು:-**

1. ಶ್ರೀ ವಿದ್ಯಾರಣ್ಯ, ಕುವೆಂಪುನಗರ 2ನೇ ಹಂತ,
2. ಶ್ರೀ ಅಶ್ವಥನಾರಾಯಣ,

ಮೊದಲನೆಯದಾಗಿ ಹಿಂದಿನ ಸಭೆಯಲ್ಲಿ ಚರ್ಚೆ ನಡೆದಿದ್ದ ವಿಷಯಗಳ ಬಗ್ಗೆ ಸಹಾಯಕ ಅಧೀಕ್ಷಕ ಇಂಜಿನಿಯರ್(ವಿ) ರವರು ಅನುಪಾಲನಾ ವರದಿಯನ್ನು ಓದಿ ಗ್ರಾಹಕರ ಕುಂದು ಕೊರತೆಗಳನ್ನು ಈಗಾಗಲೇ ಬಗೆಹರಿಸಿರುವುದಾಗಿ ತಿಳಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.**

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ವಿದ್ಯಾರಣ್ಯ, ಕುವೆಂಪುನಗರ 2ನೇ ಹಂತ, 9731001861 | • ಕುವೆಂಪುನಗರ, 2ನೇ ಹಂತ ವಿವೇಕಾನಂದ ವೃತ್ತದ ಬಳಿ ಆಗಿಂದಾಗ್ಗೆ ಪರಿವರ್ತಕವು ಸಿಂಗಲ್ ಫೇಸ್ ಆಗುತ್ತಿದ್ದು, ಇದರಿಂದ ನಿರಂತರ ವಿದ್ಯುತ್ ಸರಬರಾಜು ಅಡಚಣೆಯಾಗಿ ಗ್ರಾಹಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಎಲ್.ಟಿ ವಿದ್ಯುತ್ ಮಾರ್ಗವನ್ನು ಸರಿಯಾಗಿ ಪರೀಕ್ಷಿಸಿ ಮರದ ಕೊಂಬೆ ತಗಲುತ್ತಿದ್ದಲ್ಲಿ ಅಥವಾ ವಿದ್ಯುತ್ ಕಂಬಗಳ ಅಂತರ ಹೆಚ್ಚಾಗಿದ್ದಲ್ಲಿ ಎಲ್.ಟಿ ಮಾರ್ಗದ ಹಾಗೂ 11 ಕೆ.ವಿ ವಿದ್ಯುತ್ ಮಾರ್ಗದ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡು ಟ್ರಿಪ್ಪಿಂಗ್‌ನ್ನು ಕಡಿಮೆ |

ಅಇಂ(ವಿ) ಕಛೇರಿ ಚಾ.ವಿ.ಸ.ನಿ.ನಿ.

2567
21 JUL 2018
ಮೈಸೂರು

| | | | |
|---|---|---|---|
| | | | ಮಾಡಿಕೊಳ್ಳುವಂತೆ ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ ರವರಿಗೆ ಸೂಚಿಸಿದರು. |
| 2. | **ಶ್ರೀ ಅಶ್ವಥ್ ನಾರಾಯಣ 9449833792** | • ಆರ್.ಆರ್ ಸ್ಥಾವರದ ಸಂಖ್ಯೆ A25994 ಗೆ ಗ್ರಾಹಕರ ಹೆಸರು NULL ಎಂದು ವಿದ್ಯುತ್ ಬಿಲ್ಲಿನಲ್ಲಿ ಬರುತ್ತಿರುವುದಾಗಿ ತಿಳಿಸಿದರು.<br><br>• ಆರ್.ಆರ್ ಸಂಖ್ಯೆ KVL-21018 ರ ಸಂಪರ್ಕಿತ ಹೊರೆ 1 ಕಿವ್ಯಾ ಇದ್ದು ತಂತ್ರಾಂಶದಲ್ಲಿ 1.98 ಕಿ.ವ್ಯಾ ಎಂದು ತೋರಿಸುತ್ತಿರುವುದಾಗಿ ತಿಳಿಸಿದರು.<br><br>• ಈಗಿನ ಹೊಸ SBM Machine ನಲ್ಲಿ 5 ಕಿ.ವ್ಯಾ ಗಿಂತ ಕಡಿಮೆ ಇರುವ ಸ್ಥಾವರಗಳಿಗೆ BMD ತೆಗೆದುಕೊಳ್ಳುತ್ತಿರುವುದಿಲ್ಲವೆಂದು ತಿಳಿಸಿದರು. | • ಇದಕ್ಕೆ ಹಿರಿಯ ಸಹಾಯಕ ರವರು ಸ್ಕಂದ ತಂತ್ರಾಂಶದಿಂದ ಇನ್‌ಫೋಸಿಸ್ ತಂತ್ರಾಂಶಕ್ಕೆ ವರ್ಗಾವಣೆ ಮಾಡುವ ವೇಳೆಯಲ್ಲಿ ಕೆಲವು ಆರ್.ಆರ್ ಸಂಖ್ಯೆಗಳಿಗೆ ಗ್ರಾಹಕರ ಹೆಸರು NULL ಎಂದು ತೋರಿಸುತ್ತಿರುವುದಾಗಿ ತಿಳಿಸಿದರು. ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ತಕ್ಷಣವೇ ಇದನ್ನು ಸರಿಪಡಿಸುವಂತೆ ಸೂಚಿಸಿದರು.<br><br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಆರ್.ಆರ್ ಸಂಖ್ಯೆಯ ಕಡತವನ್ನು ಪರಿಶೀಲಿಸಿ ತಂತ್ರಾಂಶದಲ್ಲಿ ಸಂಪರ್ಕಿತ ಹೊರೆಯನ್ನು ಸರಿಪಡಿಸುವಂತೆ ಹಿರಿಯ ಸಹಾಯಕರಿಗೆ ಸೂಚಿಸಿದರು.<br><br>• ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಹೊಸ SMB Machine ನಲ್ಲಿ BMD ತೆಗೆದುಕೊಳ್ಳುವ ಅವಕಾಶವಿದ್ದು, ತಪ್ಪಾಗಿ ಮಾಪಕಗಳು Mechanical ಮಾಪಕ ಎಂದು ತಂತ್ರಾಂಶದಲ್ಲಿ ನಮೂದಿಸಿದ್ದರೆ ಮಾತ್ರ ಅಂತಹ ಆರ್.ಆರ್ ಸಂಖ್ಯೆ ಸ್ಥಾವರಗಳಿಗೆ BMD ತೆಗೆದುಕೊಳ್ಳುವುದಿಲ್ಲವೆಂದು ಹಾಗೂ ಅಂತಹ ಸ್ಥಾವರಗಳಿಗೆ Mechanical ಮಾಪಕ ಎಂಬುದರ ಬದಲು Static ಮಾಪಕ ಎಂದು ಸರಿಪಡಿಸಿದರೆ ಅಥವಾ ಮೆಕ್ಯಾನಿಕಲ್ ಮಾಪಕಗಳಿದ್ದರೆ ಅದನ್ನು Static ಮಾಪಕಗಳಿಂದ ಬದಲಾಯಿಸಿ ತಂತ್ರಾಂಶದಲ್ಲಿ ನಮೂದಿಸಿದರೆ SBM ರಲ್ಲಿ BMD ತೆಗದುಕೊಳ್ಳಲು ಸಾಧ್ಯವಾಗುವುದೆಂದು ತಿಳಿಸಿದರು. |

| | | | |
|---|---|---|---|
| | | • ವಿದ್ಯುತ್ ಮಂಜೂರಾತಿ ಪತ್ರದಲ್ಲಿ ಕಾಲವಕಾಶ ೩೦ ದಿನಗಳೆಂದು ಬರುತ್ತಿರುವುದಾಗಿ ಕೆ.ಇ.ಆರ್.ಸಿ ನಿಯಮಾವಳಿ ಪ್ರಕಾರ ವಿದ್ಯುತ್ ಮಂಜೂರಾತಿ ಹಣವನ್ನು ಪಾವತಿಸಲು ೯೦ ದಿನಗಳ ಕಾಲವಕಾಶ ಇರುವುದೆಂದು ತಿಳಿಸಿದರು. | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಇದರ ಬಗ್ಗೆ ಈಗಾಗಲೇ ಪತ್ರ ವ್ಯವಹರಿಸಿದ್ದು, ಶೀಘ್ರದಲ್ಲಿ ಸರಿಪಡಿಸಲಾಗುವುದೆಂದು ತಿಳಿಸಿದರು. |
| | | • ಕೆಲವು ಕಛೇರಿಗಳಲ್ಲಿ ಅಂದಾಜು ಪಟ್ಟಿಗಳನ್ನು ಪರಿಷ್ಕರಿಸಿ ಮಂಜೂರಾತಿ ನೀಡುತ್ತಿಲ್ಲವೆಂದು ತಿಳಿಸಿದರು. | • ಇದಕ್ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳಿಗೆ ವಂದಿಸುತ್ತಾ ಮಧ್ಯಾಹ್ನ 1:00 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಪ್ರತಿಯನ್ನು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.